ಗುರುಗಣೇಶ ಭಟ್

ಕಲೆ: ಡಿ.ಕೆ. ರಮೇಶ್

# ದೇವರು

ಆ ಮುಸ್ಸಂಜೆ
ದೇವರಿಗೆ ಶಂಭೋ ಮಾಡಲು
ಹಟಮಾಡಿದ
ಎಳೆಗೆನ್ನೆಯ ಕೂಸಿಗೆ
ದೇವರು
ಶಾಪವನ್ನೇನೂ ಕೊಡಲಿಲ್ಲ.

ಪಾಪ
ಅಮಾಯಕ ದೇವರು





# ಬರಬೇಕು

ಅದು
ಅದಾಗಿಯೇ
ಬರಬೇಕು

ತೀಡಬಾರದು
ತಿಣುಕಬಾರದು
ಬರಲಿಲ್ಲವೆಂದು ಬೊಬ್ಬಿಡಬಾರದು

ಒಮ್ಮೆಗೆ
ಯಾವುದೊ ಜಾತ್ರೆಯ
ಧಾವಂತದಲ್ಲಿ ಸಿಕ್ಕಾಗ
ಅಪ್ಪಿಕೊಳ್ಳುವ ಹಾಗೆ
ಅಪ್ಪಿಕೊಳ್ಳಬೇಕು.
ತೆಕ್ಕೆಯೊಳಗೆ
ಇಟ್ಟು
ಬಡಿದಾಡಬೇಕು.
ಒಂದು ಹೆಸರಿಟ್ಟು
ಮತ್ತೆ
ಮತ್ತೆ
ಬೆಕ್ಕಿನಮರಿಯಂತೆ
ಮುದ್ದಿಸಬೇಕು

ತೀರ ಒಳಗಿಂದೆಲ್ಲೊ
ಬರುವ
ಅದು.

ಅದು
ಅದಾಗಿಯೇ ಬರಬೇಕು.